## ‘ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ’ಕ್ಕೆ ಅರ್ಜಿ ಅಹ್ವಾನಿಸಿರುವ ಬಗ್ಗೆ

ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡ ಪುಸ್ತಕ ಪ್ರಾಧಿಕಾರವು ವಿದ್ಯಾರ್ಥಿ ಯುವಜನರನ್ನು ಸಾಹಿತ್ಯಾಭಿರುಚಿಗೆ ಆಕರ್ಷಿಸಲು ಹಾಗೂ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಬೆಳೆಸಲು **ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ‘ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ’**ವನ್ನು ರಚಿಸಲು ಅರ್ಜಿಗಳನ್ನು ಆಹ್ವಾನಿಸಿದೆ. ಕನಿಷ್ಟ 5 ರಿಂದ 15 ಮಂದಿ ವಿದ್ಯಾರ್ಥಿಗಳನ್ನೊಳಗೊಂಡಂತೆ ಕಾರ್ಯಕಾರಿ ಸಮಿತಿಯೊಂದನ್ನು ರಚಿಸಿಕೊಂಡು, ಆಯಾ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಕನ್ನಡ ವಿಭಾಗಗಳ ಮುಖ್ಯಸ್ಥರ ಅನುಮೋದನೆಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಕಾಲೇಜಿನಲ್ಲಿ ಸಾಂಸ್ಕೃತಿಕ ವಾತಾವರಣವನ್ನು ಕ್ರಿಯಾಶೀಲವಾಗಿಡುವ ನಿಟ್ಟಿನಲ್ಲಿ ತಿಂಗಳಿಗೆ ಒಂದರಂತೆ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಯನ್ನು ಈ ಬಳಗವು ಹಮ್ಮಿಕೊಳ್ಳುತ್ತದೆ. ಇದಕ್ಕಾಗಿ ಪ್ರಾಧಿಕಾರದಿಂದ ಕಾರ್ಯಕ್ರಮ ಒಂದಕ್ಕೆ ರೂ.5,000–00ಗಳ ಗರಿಷ್ಟ ಮಿತಿಯೊಳಗೆ ವಾಸ್ತವಿಕ ವೆಚ್ಚವನ್ನು ಭರಿಸಲಾಗುವುದು. ಇದಲ್ಲದೆ ಪ್ರಾಧಿಕಾರವು ಹಮ್ಮಿಕೊಳ್ಳುವ ಎಲ್ಲಾ ಯೋಜನೆ ಹಾಗೂ ಕಾರ್ಯಕ್ರಮಗಳಲ್ಲಿ ಈ **‘ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ’**ವನ್ನು ತೊಡಗಿಸಿಕೊಳ್ಳಲಾಗುವುದು. ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:30.01.2015.

ನಿಗದಿತ ಅರ್ಜಿ ನಮೂನೆಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಕಚೇರಿಯನ್ನು ಅಥವಾ ಕನ್ನಡ ಪುಸ್ತಕ ಪ್ರಾಧಿಕಾರದ ಅಂತರ್ಜಾಲ ತಾಣ www.kannadapustakapradhikara.com ಅನ್ನು ಸಂಪರ್ಕಿಸಬಹುದಾಗಿದೆ. ಅರ್ಜಿಗಳನ್ನು ದಿನಾಂಕ:31.12.2014ರೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – 560 002 – ಅವರಿಗೆ ಕಳುಹಿಸಿಕೊಡಲು ಕೋರಿದೆ.

ಸಹಿ/–
ಆಳಿತಾಧಿಕಾರಿ (ಪ್ರ)
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

## ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ ಅರ್ಜಿ ನಮೂನೆ

| | | |
|---|---|---|
| 1. | ಕಾಲೇಜಿನ ಹೆಸರು | |
| 2. | ಪೂರ್ಣ ವಿಳಾಸ / ದೂರವಾಣಿ ಸಂಖ್ಯೆ | |
| 3. | ಪ್ರಾಂಶುಪಾಲರ ಹೆಸರು | |
| 4. | ಕನ್ನಡ ವಿಭಾಗದ ಮುಖ್ಯಸ್ಥರ ಹೆಸರು | |
| 5. | ವಿದ್ಯಾರ್ಥಿಬಳಗದಲ್ಲಿ ಇರುವ ಪದಾಧಿಕಾರಿಗಳ (ವಿದ್ಯಾರ್ಥಿಗಳ) ಹೆಸರು<br><br>ಪೂರ್ಣ ವಿಳಾಸ:<br>ಸಂಪರ್ಕ ಸಂಖ್ಯೆ:<br>(5 ರಿಂದ 12 ಮಂದಿ ಮಾತ್ರ) | |
| 6. | ಅಧ್ಯಕ್ಷ / ಅಧ್ಯಕ್ಷೆ<br>(ಕಂಡಿಕೆ (5)ನ್ನು ಹೊರತುಪಡಿಸಿ) | |
| 7. | ಉಪಾಧ್ಯಕ್ಷ / ಉಪಾಧ್ಯಕ್ಷೆ | |
| 8. | ಪದಾಧಿಕಾರಿಗಳೂ ಸೇರಿದಂತೆ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಕನಿಷ್ಠ ಒಬ್ಬರಾದರೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕಾಗಿದ್ದು ಅವರ ಹೆಸರು / ವಿಳಾಸ /ಸಂಪರ್ಕ ಸಂಖ್ಯೆ: | |
| 9. | ಪ್ರಾಂಶುಪಾಲರ ಸಹಿ: | |
| 10. | ಕನ್ನಡ ವಿಭಾಗದ ಮುಖ್ಯಸ್ಥರ ಸಹಿ: | |
| 11. | ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಿ | |

ಮೇಲ್ಕಂಡ ಎಲ್ಲ ವಿವರಗಳೂ ಸತ್ಯವಾಗಿರುತ್ತವೆಯೆಂದೂ ಈ ಸಂಬಂಧ ಯಾವುದೇ ಕಾನೂನು ತೊಡಕುಗಳು ಬಂದಲ್ಲಿ ನನ್ನ ಸ್ವಯಂ ಖರ್ಚಿನಿಂದ ಸ್ವಂತ ಜವಾಬ್ದಾರಿಯಿಂದ ನಿರ್ವಹಿಸುತ್ತೇನೆಂದು ಪ್ರಮಾಣೀಕರಿಸುತ್ತೇನೆ.

ತಮ್ಮ ವಿಶ್ವಾಸಿ,

ಸಹಿ :

ಅಧ್ಯಕ್ಷ / ಅಧ್ಯಕ್ಷೆ ಹೆಸರು :

ವಿಳಾಸ / ದೂರವಾಣಿ ಸಂಖ್ಯೆ :

# ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ

ವಿದ್ಯಾರ್ಥಿ ಯುವಜನರನ್ನು ಸಾಹಿತ್ಯಾಭಿರುಚಿಗೆ ಆಕರ್ಷಿಸಲು ಹಾಗೂ ಸಾಂಸ್ಕೃತಿಕ ಕ್ರಿಯಾಶೀಲತೆಯನ್ನು ಬೆಳೆಸಲು ಪದವಿ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರಗಳಲ್ಲಿ ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗಗಳನ್ನು ರಚಿಸಬಹುದಾಗಿದೆ.

**1) ಹೆಸರು ಮತ್ತು ಸ್ವರೂಪ :**

ಅ) ಕನ್ನಡ ಪುಸ್ತಕ ಪ್ರಾಧಿಕಾರದ ನೇರ ಉಸ್ತುವಾರಿ ಹಾಗೂ ಮಾರ್ಗದರ್ಶನದಲ್ಲಿ 'ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ' ಕಾರ್ಯ ನಿರ್ವಹಿಸುತ್ತದೆ.

**2) ಪದಾಧಿಕಾರತ್ವ:**

ಅ) ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗವು ಪ್ರತಿ ಕಾಲೇಜಿನಲ್ಲಿ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿಕೊಳ್ಳುತ್ತದೆ. ಅಧ್ಯಕ್ಷ / ಅಧ್ಯಕ್ಷೆ, (ಅಗತ್ಯವಿರುವ ಕಡೆ ಗೌರವಾಧ್ಯಕ್ಷ/ ಗೌರವಾಧ್ಯಕ್ಷೆ ರನ್ನೂ ಆಯ್ಕೆ ಮಾಡಬಹುದು) ಉಪಾಧ್ಯಕ್ಷ /ಉಪಾಧ್ಯಕ್ಷೆ (ಅಗತ್ಯವಿರುವ ಕಡೆ ಒಬ್ಬರಿಗಿಂತ ಹೆಚ್ಚು, ಜನರನ್ನು ಉಪಾಧ್ಯಕ್ಷ / ಉಪಾಧ್ಯಕ್ಷೆ ಯರನ್ನು ಆಯ್ದುಕೊಳ್ಳಬಹುದು.

ಆ) ಆಯಾ ಕಾಲೇಜಿನ ಯಾವುದೇ ವ್ಯಕ್ತಿ ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗದ ಸದಸ್ಯರಾಗಬಹುದು.

ಇ) ಆಯಾ ಕಾಲೆಜಿನ ಮುಖ್ಯಸ್ಥರ ಮೂಲಕ ಅನುಮೋದನೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ರಾಧಿಕಾರದ ಸ್ಥಾಯಿ ಸಮಿತಿ ಸಭೆಯು ಅನುಮೋದಿಸಿದ ನಂತರ ಅದು ಅಧಿಕೃತವಾಗುತ್ತದೆ.

ಈ) ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗದ ಆಶಯಗಳಿಗೆ ಅನುಗುಣವಾಗಿ ಪ್ರತಿಯೊಬ್ಬ ಸದಸ್ಯ ಸಾಮರ್ಥ್ಯಾನುಸಾರ ಸ್ವಯಂ ಪ್ರೇರಣೆಯಿಂದ ಕಾರ್ಯ ನಿರ್ವಹಿಸಿ ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗವನ್ನು ಸಕ್ರಿಯವಾಗಿಡಬೇಕು.

ಉ) ಆಯಾ ಜಿಲ್ಲೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು, ಆಯಾ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಕನ್ನಡ ವಿಭಾಗಗಳ ಮುಖ್ಯಸ್ಥರು ಇದರ ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಊ)ಈ ಪದಾಧಿಕಾರಿಗಳ ಜೊತೆ ಸದಸ್ಯರ ಸಂಖ್ಯೆಗೆ ಅನುಗುಣವಾಗಿ 5 ರಿಂದ 15 ಸಂಖ್ಯೆಯೊಳಗೆ ಕ್ರಿಯಾಶೀಲರನ್ನು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು.

**3) ಪದಾಧಿಕಾರಿಗಳ ಆಯ್ಕೆಗೆ ಸಾಮಾನ್ಯ ನಿಯಮಾವಳಿಗಳು:**

ಆಯಾ ವಾರ್ಷಿಕ ಸಾಲಿಗೆ ಆಯ್ಕೆಯಾಗುವ ಪದಾಧಿಕಾರಿಗಳಲ್ಲಿ ಒಬ್ಬರಾದರೂ ವಿದ್ಯಾರ್ಥಿನಿ, ಒಬ್ಬರಾದರೂ ಅತಿ ಹಿಂದುಳಿದ ವರ್ಗದವರು, ಒಬ್ಬರಾದರೂ ಪರಿಶಿಷ್ಟ ಜಾತಿ / ಪಂಗಡಕ್ಕೆ ಸೇರಿದವರು ಇರುವುದು ಕಡ್ಡಾಯವಾಗಿರುತ್ತದೆ. ಆಯಾ ವರ್ಗದ ವಿದ್ಯಾರ್ಥಿ / ವಿದ್ಯಾರ್ಥಿನಿಯರು ಕಾಲೇಜುಗಳಲ್ಲಿ ದಾಖಲುಗೊಂಡಿಲ್ಲದಲ್ಲಿ ಈ ನಿಯಮ ಸಡಲಿಸಬಹುದಾಗಿದೆ.

**4) ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗದ ಚಟುವಟಿಕೆಗಳು :**

ಅ) ಹೊಸ ಬರಹಗಾರರ ಚೊಚ್ಚಲ ಕೃತಿಗೆ ಪ್ರೋತ್ಸಾಹಧನಕ್ಕೆ ಆಯ್ಕೆ ಮಾಡುವ ಪ್ರಕಟಣೆ ಕೊಟ್ಟಾಗ ಹಸ್ತಪ್ರತಿಗಳನ್ನು ಕಳುಹಿಸುವಂತೆ ಯುವಲೇಖಕ / ಲೇಖಕಿಯರನ್ನು ಪ್ರೋತ್ಸಾಹಿಸುವುದು.

ಆ) ತಿಂಗಳಿಗೆ ಒಂದಾದರೂ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಕಾಲೇಜಿನಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ ವಾತಾವರಣವನ್ನು ಕ್ರಿಯಾಶೀಲವಾಗಿರಿಸುವುದು. ಈ ಚಟುವಟಿಕೆಗಳಿಗೆ ತಿಂಗಳೊಂದಕ್ಕೆ ರೂ. 5,000/- (ಐದು ಸಾವಿರ ರೂ.ಗಳು ಮಾತ್ರ)ಗಳ ಗರಿಷ್ಠ ಮಿತಿಯೊಳಗೆ ವಾಸ್ತವಿಕ ವೆಚ್ಚ ಅನುಸಾರ ಪ್ರಾಧಿಕಾರವು ವೆಚ್ಚ ಭರಿಸುತ್ತದೆ. ಈ ಕಾರ್ಯಕ್ರಮವು ಪ್ರಾಧಿಕಾರದ ಸ್ಥಾಯಿ ಸಮಿತಿ ಸಭೆಯ ನಿರ್ಣಯದ ನಂತರ ಮಾಡುವುದು ಅಥವಾ ಸ್ಥಾಯಿ ಸಮಿತಿಯ ಪೂರ್ವಭಾವಿ ಅನುಮತಿ ಹೊಂದಿರತಕ್ಕದ್ದು. ಈ ಕಾರ್ಯಕ್ರಮದಲ್ಲಿ ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗವು ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತಿತರರ ಜೊತೆ ಸಹಯೋಗದಲ್ಲೂ ಕಾರ್ಯಕ್ರಮ ರೂಪಿಸಬಹುದಾಗಿದೆ.

ಇ) ಕನ್ನಡ ಪುಸ್ತಕ ಪ್ರಾಧಿಕಾರವು ವಾಚನಾಭಿರುಚಿ ಕಮ್ಮಟ, ಯುವ ಲೇಖಕರ ಸಮ್ಮೇಳನ, ಪುಸ್ತಕ ಮೇಳ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ "ನನ್ನ ಮೆಚ್ಚಿನ ಪುಸ್ತಕ" ವಿಷಯ ಮಂಡನೆ ಸ್ಪರ್ಧೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಸಕ್ರಿಯ ಸಹಕಾರ ನೀಡುವುದು.

ಈ) ಪುಸ್ತಕ ಓದುವ ಅಭಿರುಚಿ, ಸಾಹಿತ್ಯ ರಸ ಗ್ರಹಣದ ಆಸಕ್ತಿ ಹೆಚ್ಚಿಸಲು ಹೊಸ ತಲೆಮಾರಿನವರಿಗಾಗಿ ರಚನಾತ್ಮಕವಾದ ಯಾವುದೇ ಬಗೆಯ ಸೂಕ್ತ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳನ್ನು ಪುಸ್ತಕ ಪ್ರಾಧಿಕಾರದ ಅನುದಾನದ ಸಹಾಯದಿಂದ ಕೈಗೆತ್ತಿಕೊಳ್ಳಬಹುದಾಗಿದೆ.

**5) ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗದ ನಿರ್ವಹಣೆ – ಮಾರ್ಗದರ್ಶನ :**

ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರು ಆಯಾ ಪ್ರಾದೇಶಿಕ ವಿಭಾಗಗಳಿಗೆ ಪುಸ್ತಕ ಪ್ರೇಮಿ ವಿದ್ಯಾರ್ಥಿ ಬಳಗ ಕಾರ್ಯಚಟುವಟಿಕೆಗಳಿಗೆ ಅಗತ್ಯ ಮಾರ್ಗದರ್ಶನ, ಸಹಕಾರ ಒದಗಿಸುತ್ತಾರೆ.

ಸಹಿ/-
ಆಡಳಿತಾಧಿಕಾರಿ (ಪ್ರ)
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು